**ಬುತ್ತಿ ಚಿಗುರು**

## ಮಾರ್ಕ್ಸ್ ಕಾರ್ಡ್



ಕೆಲಸದಿಂದ ಸುಸ್ತಾಗಿ ಮನೆಗೆ ಬಂದ ಪರಮೇಶಿ, ಕುರ್ಚಿ ಮೇಲೆ ಕುಳಿತು, 'ನೀರು ಕೊಡೆ' ಅಂದ. ಪತ್ನಿ ಅವನಿಗೆ ನೀರು ಕೊಟ್ಟು ಕಾಫಿ ಮಾಡಲು ಒಳಗೆ ಹೋದಳು. ಅಷ್ಟರಲ್ಲಿ ಟೀಪಾಯ್ ಮೇಲೆ ಇಟ್ಟಿದ್ದ ಮಾರ್ಕ್ಸ್ ಕಾರ್ಡ್ ಕಣ್ಣಿಗೆ ಬಿತ್ತು. ಪರಮೇಶಿ ಕೆಂಡಾಮಂಡಲವಾದ. 'ನಾಚಿಕೆ ಆಗಲ್ವೇನೊ ನಿನಗೆ? ನಿನ್ನಂತವನು ನನ್ನ ಹೊಟ್ಟೇಲಿ ಹುಟ್ಟಿದ್ದಕ್ಕೆ ಅಸಹ್ಯ ಆಗ್ತಿದೆ ನಂಗೆ...' ಎಂದ ಕೂಗಾಡಿದ. ಒಳಗಿದ್ದ ಪತ್ನಿ, 'ರೀ... ಸ್ವಲ್ಪ ಕೇಳಿ ಇಲ್ಲಿ' ಎಂದಾಗ, 'ಎಲ್ಲಾ ನೀ ಮುದ್ದು ಮಾಡಿದ್ದರ ಫಲ... ಸುಮ್ನಿರು ನೀನು' ಎನ್ನುತ್ತ ಮಗನ ಕಡೆ ತಿರುಗಿ, 'ನೂರಕ್ಕೆ ನಾಲಕ್ಕು, ಐದು ಮಾರ್ಕ್ಸ್ ತಗೊಂಡಿದ್ದೀಯಲ್ಲ? ಬಡವ ರ‍್ಯಾಸ್ಕಲ್...' ಮತ್ತೂ ರೇಗಿದ. ಪುನಃ ಪತ್ನಿ, 'ರೀ.. ಇಲ್ಲಿ ಸ್ವಲ್ಪ ಕೇಳಿ' ಎಂದಳು. 'ನೀ ಸ್ವಲ್ಪ ಬಾಯಿ ಮುಚ್ಚಿಕೊಂಡು ಇರ್ತಿಯಾ? ಇವನಿಗೆ ನಾವು ಕೊಡೊ ಸವಲತ್ತು ಜಾಸ್ತಿ ಆಗಿದೆ... ಅದಕ್ಕೇ ಹೀಗೆ ಸಾಧನೆ ಮಾಡ್ತಾ ಇದ್ದಾನೆ...' ಎಂದಿದ್ದೇ ತಡ ಆತನ ಪತ್ನಿ ಹೊರಗೆ ಬಂದು, 'ರೀ, ಬೆಳಿಗ್ಗೆ ನಿಮ್ಮ ಆಲ್ಮೇರಾ ಕ್ಲೀನ್ ಮಾಡುವಾಗ ಸಿಕ್ತು, ಅದು ನಿಮ್ದೇ ಕಣ್ರೀ ಮಾರ್ಕ್ಸ್ ಕಾರ್ಡು' ಎಂದಳು.

**ಅರವಿಂದ ಜಿ. ಜೋಷಿ**

---



## ಏನು ಹೇಳಿದ್ದಾರೆ?

ರಾತ್ರಿ ಹೊತ್ತು ಕುಡುಕನೊಬ್ಬ ತೂರಾಡುತ್ತ ರಸ್ತೆ ಮೇಲೆ ಹೋಗುತ್ತಿದ್ದ. ಎದುರಿಗೆ ಪೊಲೀಸನೊಬ್ಬ 'ಏನಯ್ಯಾ? ರಾತ್ರಿ ಇಷ್ಟು ಹೊತ್ತಿನಲ್ಲಿ ಸಿಕ್ಕಾಪಟ್ಟೆ ಕುಡಿದು ತೂರಾಡುತ್ತ ಹೋಗ್ತಾ ಇದ್ದೀಯಲ್ಲ... ಗಾಂಧೀಜಿ ಏನು ಹೇಳಿದ್ದಾರೆ ಗೊತ್ತಾ?' ಎಂದು ಕೇಳಿದ. ಕುಡುಕ 'ಏನು ಹೇಳಿದ್ದಾರೆ?' ಎಂದು ಕೇಳಿದ. ಪೊಲೀಸ್ 'ಕುಡಿತ ಮನುಷ್ಯನ ಮಹಾವೈರಿ ಅಂತ ಹೇಳಿದಾರೆ' ಎಂದ. ಕುಡುಕ 'ಅದೇ ಗಾಂದೀಜಿ ಏನು ಹೇಳಿದ್ದಾರೆ ಗೊತ್ತಾ?' ಎಂದು ಕೇಳಿದ. ಪೊಲೀಸ್ ಕುತೂಹಲದಿಂದ 'ಏನು ಹೇಳಿದ್ದಾರೆ?' ಎಂದು ಪ್ರಶ್ನಿಸಿದ. ಕುಡುಕ, 'ವೈರಿಗಳನ್ನು ಪ್ರೀತಿಸು ಎಂದು ಹೇಳಿದ್ದಾರೆ' ಎಂದ.

**ಎಂ.ಕೆ. ಮಂಜುನಾಥ್**